ಸರ್ಕಾರದ 'ಭಾಗ್ಯ'ಗಳು ಎಷ್ಟು ಯೋಗ್ಯ: 'ದಕ್ಷ್', 'ಪ್ರಜಾವಾಣಿ' ಸಮೀಕ್ಷೆಯಲ್ಲಿ ಮತದಾರರ ಅಭಿಪ್ರಾಯ

# ಅನ್ನಕ್ಕೆ ಚಿನ್ನದ ಗರಿ, ಕೃಷಿಗೆ ಖುಷಿ!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದ ಮೇಲೆ 'ಭಾಗ್ಯ'ಗಳನ್ನೇ ಕರುಣಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಜನರನ್ನು ಮೆಚ್ಚಿಸುವ, ಓಲೈಸುವ ಹಾದಿಯಲ್ಲಿ ಸಾಗಲು ಪ್ರಯತ್ನಿಸಿದ್ದಾರೆ.

ಹತ್ತಾರು ಭಾಗ್ಯಗಳನ್ನು ಅನುಷ್ಠಾನ ಮಾಡಿ ಜನಪ್ರಿಯತೆಯ ಉತ್ತುಂಗಕ್ಕೆ ಏರುವ ಯತ್ನವನ್ನೂ ನಡೆಸಿದ್ದಾರೆ. ಈ ಭಾಗ್ಯಗಳ ಬಗ್ಗೆ ಮತದಾರರ ಒಲುವು-ನಿಲುವು ಹೇಗಿದೆ, ಅದು ಜನರಿಗೆ ತಲುಪಿದೆಯೇ ಎಂಬ ಬಗ್ಗೆ **'ದಕ್ಷ್'** ಸಮೀಕ್ಷೆಯಲ್ಲಿ ಜನಮತ ಸಂಗ್ರಹಿಸಲಾಗಿದೆ. ಅದರ ಪೂರ್ಣ ಪಾಠ ಇಲ್ಲಿದೆ:

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ 'ಹಸಿವು ಮುಕ್ತ ಕರ್ನಾಟಕ' ನಿರ್ಮಾಣ ತಮ್ಮ ಕನಸು ಎಂದು ಪ್ರತಿಪಾದಿಸಿದ ಸಿದ್ದರಾಮಯ್ಯ, ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬದ ತಲಾ ಸದಸ್ಯರಿಗೆ ಒಂದು ಕೆ.ಜಿ ಅಕ್ಕಿಗೆ ₹1ರ ದರದಲ್ಲಿ ತಿಂಗಳಿಗೆ ಏಳು ಕೆ.ಜಿ. ಅಕ್ಕಿ ನೀಡುವುದಾಗಿ ಪ್ರಕಟಿಸಿದರು. 'ಅನುಷ್ಠಾನಯೋಗ್ಯವಲ್ಲದ ಯೋಜನೆ' ಎಂದು ಆರ್ಥಿಕ ವಿಶ್ಲೇಷಕರು ಟೀಕಿಸಿದರು. ಅದಕ್ಕೆಲ್ಲ ತಲೆಕೆಡಿಸಿಕೊಳ್ಳದ ಸಿದ್ದರಾಮಯ್ಯ 'ಅನ್ನಭಾಗ್ಯ'ದ ಹೆಸರಿನಲ್ಲಿ ಅಕ್ಕಿ ವಿತರಿಸುವ ಯೋಜನೆ ಜಾರಿಗೆ ತಂದರು. ₹1ರ ಬದಲು ಉಚಿತವಾಗಿ ಅಕ್ಕಿ ವಿತರಿಸುವ ಯೋಜನೆಯಾಗಿ ಇದನ್ನು ಪರಿವರ್ತಿಸಿದರು. ರಾಜ್ಯದ 1.08 ಕೋಟಿ ಕುಟುಂಬಗಳು ಅಂದರೆ ಸರಿಸುಮಾರು 4 ಕೋಟಿಗೂ ಹೆಚ್ಚಿನ ಜನರು ಈಗ ಉಚಿತ ಅಕ್ಕಿಭಾಗ್ಯ ಪಡೆಯುತ್ತಿದ್ದಾರೆ.

**13,298**
ಸಮೀಕ್ಷೆಯಲ್ಲಿ ಭಾಗವಹಿಸಿದ ಜನರ ಸಂಖ್ಯೆ

ರಾಜ್ಯದ ಶೇ 79ರಷ್ಟು ಜನರು ಇದು ಉತ್ತಮ ಯೋಜನೆ ಎಂದು ಪ್ರತಿಪಾದಿಸಿದ್ದಾರೆ. ಶೇ 15ರಷ್ಟು ಮಂದಿ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಶೇ 6ರಷ್ಟು ಮಂದಿ ನಾವು ಈ ಯೋಜನೆಯ ಸೌಲಭ್ಯ ಪಡೆದಿಲ್ಲ ಎಂದು ತಿಳಿಸಿದ್ದಾರೆ.

ಮಳೆಯಾಶ್ರಿತ ಕೃಷಿಯನ್ನು ನೆಚ್ಚಿಕೊಂಡ ರೈತರ ಜಮೀನಿಗೆ ನೀರು ಒದಗಿಸಲು ರಾಜ್ಯ ಸರ್ಕಾರ 'ಕೃಷಿ ಭಾಗ್ಯ' ಯೋಜನೆ ಜಾರಿಗೆ ತಂದಿದೆ. ಇಲ್ಲಿಯವರೆಗೆ 2 ಲಕ್ಷ ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಇದರಿಂದಾಗಿ ಒಣಬೇಸಾಯ ನೆಚ್ಚಿಕೊಂಡ ರೈತರ ಹೊಲದ ಇಳುವರಿ ಶೇ 32ರಷ್ಟು ಹೆಚ್ಚಾಗಿದೆ. ರೈತರಲ್ಲಿ ಸಂತಸ ಮೂಡಿದೆ ಎಂದೂ ಅದು ಪ್ರತಿಪಾದಿಸುತ್ತಿದೆ. ಈ ಬಗ್ಗೆ ವಿಚಾರಿಸಿದಾಗ ಶೇ 58ರಷ್ಟು ರೈತರು ಮೆಚ್ಚುಗೆ ಸೂಚಿಸಿದ್ದಾರೆ. ಶೇ 17ರಷ್ಟು ಜನರು 'ಈ ಯೋಜನೆ ಸಿಕ್ಕಿಲ್ಲ' ಎಂದು ಹೇಳಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ, ಶಾಲಾ ಮಕ್ಕಳಿಗೆ ಸೈಕಲ್ ವಿತರಿಸುವ ಯೋಜನೆಯನ್ನು ಸಿದ್ದರಾಮಯ್ಯ ಸರ್ಕಾರ ಮುಂದುವರಿಸಿದೆ. ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಸೀಮಿತವಾಗಿದ್ದ ಯೋಜನೆಯನ್ನು ಅನುದಾನಿತ ಶಾಲಾ ಮಕ್ಕಳಿಗೂ ವಿಸ್ತರಿಸಲಾಗಿದೆ. ಸರ್ಕಾರದ ಅತ್ಯಂತ ಜನಪ್ರಿಯ ಯೋಜನೆಗೆ ಶೇ 69 ಅಂಕಗಳನ್ನು ಮತದಾರರು ನೀಡಿದ್ದಾರೆ. ಶೇ 13ರಷ್ಟು ಮಂದಿ 'ಈ ಯೋಜನೆ ತಲುಪಿಲ್ಲ' ಎಂದು ವಿವರಿಸಿದ್ದಾರೆ.

ಅನುಷ್ಠಾನದ ವಿವಿಧ ಹಂತದಲ್ಲಿರುವ 'ಮುಖ್ಯಮಂತ್ರಿ ಅನಿಲ ಭಾಗ್ಯ' ಯೋಜನೆಗೆ ಶೇ 64ರಷ್ಟು ಅಂಕ ಸಿಕ್ಕಿದೆ.

ಅಡುಗೆ ಅನಿಲ ಸಂಪರ್ಕ ಹೊಂದಿಲ್ಲದ ಕುಟುಂಬಗಳಿಗೆ ಸಿಲಿಂಡರ್ ಪೂರೈಸಿ, ಸೀಮೆಎಣ್ಣೆ ಬಳಕೆಯನ್ನು ಕೊನೆಗಾಣಿಸಲು ಕೇಂದ್ರ ಸರ್ಕಾರ 'ಉಜ್ವಲ' ಯೋಜನೆ ರೂಪಿಸಿದೆ. ಕೇಂದ್ರ ಸರ್ಕಾರದ ನಿಯಮಗಳ ಕಾರಣಕ್ಕೆ 20 ಲಕ್ಷ ಫಲಾನುಭವಿಗಳಿಗೆ ಮಾತ್ರ ಸಿಲಿಂಡರ್ ಸಿಗಲಿದೆ. 'ಉಜ್ವಲ' ಯೋಜನೆ ವ್ಯಾಪ್ತಿಗೆ ಒಳಪಡದ 15 ಲಕ್ಷ ಬಿಪಿಎಲ್ ಕುಟುಂಬಗಳಿಗೆ 'ಅನಿಲ ಭಾಗ್ಯ' ಯೋಜನೆ ರೂಪಿಸಲಾಗಿದೆ. ಪ್ರತಿ ಕುಟುಂಬಕ್ಕೆ 14.2 ಕೆ.ಜಿಯ ಒಂದು ಸಿಲಿಂಡರ್, ಸ್ಟೌ, ರೆಗ್ಯುಲೇಟರ್ ಹಾಗೂ ಎರಡು ಬಾರಿ ಸಿಲಿಂಡರ್ ತುಂಬಿಸಿಕೊಡುವ ಯೋಜನೆಯಡಿ ಪ್ರತಿ ಕುಟುಂಬಕ್ಕೆ ₹4,040ರಂತೆ ಸುಮಾರು ₹1,200 ಕೋಟಿ ವೆಚ್ಚವಾಗಬಹುದು ಎಂಬ ಅಂದಾಜಿದೆ.

ಈ ಯೋಜನೆ ಕುರಿತು ಕೇಳಲಾದ ಪ್ರಶ್ನೆಗೆ ಶೇ 64ರಷ್ಟು ಮತಗಳು ಬಿದ್ದಿವೆ. ಶೇ 23ರಷ್ಟು ಜನ ಅತೃಪ್ತಿ ತೋರಿದ್ದಾರೆ. ಶೇ 13ರಷ್ಟು ಮಂದಿ 'ಗೊತ್ತಿಲ್ಲ' ಎಂದು ಹೇಳಿದ್ದಾರೆ.




## ಇಂದಿರಾ ಕ್ಯಾಂಟೀನ್‌ಗೆ ಭರ್ಜರಿ ಸ್ಪಂದನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ ಸರ್ಕಾರ ಆರಂಭಿಸಿರುವ ಇಂದಿರಾ ಕ್ಯಾಂಟೀನ್‌ಗೆ ಭರ್ಜರಿ ಸ್ಪಂದನೆ ಸಿಕ್ಕಿದೆ.

ಕಳೆದ ವರ್ಷದ ಆಗಸ್ಟ್‌ನಿಂದ ₹5 ದರದಲ್ಲಿ ಉಪಾಹಾರ ಹಾಗೂ ₹10 ದರದಲ್ಲಿ ಮಧ್ಯಾಹ್ನ ಮತ್ತು ರಾತ್ರಿ ಊಟ ಒದಗಿಸುವ ಸೌಲಭ್ಯವನ್ನು ಸರ್ಕಾರ ಜಾರಿ ಮಾಡಿದೆ.

ಇಂದಿರಾ ಕ್ಯಾಂಟೀನ್ ಕುರಿತು ಸಮೀಕ್ಷೆಯಲ್ಲಿ ಕೇಳಿದ ಪ್ರಶ್ನೆಗೆ ಬೆಂಗಳೂರಿನ ಮತದಾರರು ಸರಾಸರಿ ಶೇ 97ರಷ್ಟು ಅಂಕ ಕೊಟ್ಟಿದ್ದಾರೆ. ಆದರೆ, ಬಿಬಿಎಂಪಿಯ ಗಡಿಭಾಗದಲ್ಲಿರುವ ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ಶೇ 45ರಿಂದ ಶೇ 65 ಅಂಕಗಳು ದೊರಕಿವೆ.

ರಾಜಧಾನಿಯಿಂದ ಹೊರಗಿನ ಜಿಲ್ಲೆಗಳಲ್ಲಿ ಇದೇ ಜನವರಿಯಿಂದ ಈಚೆಗೆ ಇಂದಿರಾ ಕ್ಯಾಂಟೀನ್‌ಗಳು ಆರಂಭವಾಗಿವೆ. ಈ ಭಾಗದಲ್ಲಿ ಶೇ 31ರಷ್ಟು ಜನರು ಮಾತ್ರ ತೃಪ್ತಿ ವ್ಯಕ್ತಪಡಿಸಿದ್ದಾರೆ. ಶೇ 36ರಷ್ಟು ಜನರು ಅತೃಪ್ತಿ ತೋರಿದ್ದಾರೆ. ಶೇ 33ರಷ್ಟು ಜನರು 'ಬಳಸಿಲ್ಲ' ಎಂದು ತಿಳಿಸಿದ್ದಾರೆ.

### ಅಶೋಕ್ ಖೇಣಿ — ಕೆಎಂಪಿ
ಜಿಲ್ಲೆ: ಬೀದರ್
ಕ್ಷೇತ್ರ: ಬೀದರ್ ದಕ್ಷಿಣ




### ಮಲ್ಲಿಕಾರ್ಜುನ ಖೂಬಾ — ಜೆಡಿಎಸ್
ಜಿಲ್ಲೆ: ಬೀದರ್
ಕ್ಷೇತ್ರ: ಬಸವಕಲ್ಯಾಣ




### ರಹೀಂ ಖಾನ್ — ಕಾಂಗ್ರೆಸ್
ಜಿಲ್ಲೆ: ಬೀದರ್
ಕ್ಷೇತ್ರ: ಬೀದರ್




### ಪ್ರಭು ಬಿ. ಚೌವ್ಹಾಣ — ಬಿಜೆಪಿ
ಜಿಲ್ಲೆ: ಬೀದರ್
ಕ್ಷೇತ್ರ: ಔರಾದ




### ಖಮರುಲ್ ಇಸ್ಲಾಂ (ದಿವಂಗತ) — ಕಾಂಗ್ರೆಸ್
ಜಿಲ್ಲೆ: ಕಲಬುರ್ಗಿ
ಕ್ಷೇತ್ರ: ಕಲಬುರ್ಗಿ ಉತ್ತರ




### ಡಾ. ಉಮೇಶ್ ಜಾಧವ್ — ಕಾಂಗ್ರೆಸ್
ಜಿಲ್ಲೆ: ಕಲಬುರ್ಗಿ
ಕ್ಷೇತ್ರ: ಚಿಂಚೋಳಿ




### ಜಿ. ರಾಮಕೃಷ್ಣ — ಕಾಂಗ್ರೆಸ್
ಜಿಲ್ಲೆ: ಕಲಬುರ್ಗಿ
ಕ್ಷೇತ್ರ: ಕಲಬುರ್ಗಿ ಗ್ರಾಮಾಂತರ




### ಬಿ. ಆರ್. ಪಾಟೀಲ — ಕೆಜೆಪಿ
ಜಿಲ್ಲೆ: ಕಲಬುರ್ಗಿ
ಕ್ಷೇತ್ರ: ಆಳಂದ




### ರಮೇಶ ಭೂಸನೂರ — ಬಿಜೆಪಿ
ಜಿಲ್ಲೆ: ವಿಜಯಪುರ
ಕ್ಷೇತ್ರ: ಸಿಂದಗಿ

### ರಾಜು ಆಲಗೂರ — ಕಾಂಗ್ರೆಸ್
ಜಿಲ್ಲೆ: ವಿಜಯಪುರ
ಕ್ಷೇತ್ರ: ನಾಗಠಾಣ

### ಯಶವಂತರಾಯಗೌಡ ಪಾಟೀಲ — ಕಾಂಗ್ರೆಸ್
ಜಿಲ್ಲೆ: ವಿಜಯಪುರ
ಕ್ಷೇತ್ರ: ಇಂಡಿ

### ಶಿವಾನಂದ ಎಸ್. ಪಾಟೀಲ — ಕಾಂಗ್ರೆಸ್
ಜಿಲ್ಲೆ: ವಿಜಯಪುರ
ಕ್ಷೇತ್ರ: ಬಸವನ ಬಾಗೇವಾಡಿ

### ಎ. ಎಸ್. ಪಾಟೀಲ ನಡಹಳ್ಳಿ — ಕಾಂಗ್ರೆಸ್
ಜಿಲ್ಲೆ: ವಿಜಯಪುರ
ಕ್ಷೇತ್ರ: ದೇವರ ಹಿಪ್ಪರಗಿ




### ಗುರು ಪಾಟೀಲ ಶಿರವಾಳ — ಬಿಜೆಪಿ
ಜಿಲ್ಲೆ: ಯಾದಗಿರಿ
ಕ್ಷೇತ್ರ: ಶಹಾಪುರ




### ಜೆ.ಟಿ.ಪಾಟೀಲ — ಕಾಂಗ್ರೆಸ್
ಜಿಲ್ಲೆ: ಬಾಗಲಕೋಟೆ
ಕ್ಷೇತ್ರ: ಬೀಳಗಿ




### ಬಿ.ಬಿ. ಚಿಮ್ಮನಕಟ್ಟಿ — ಕಾಂಗ್ರೆಸ್
ಜಿಲ್ಲೆ: ಬಾಗಲಕೋಟೆ
ಕ್ಷೇತ್ರ: ಬದಾಮಿ




### ಅಂಕ 'ಗಣಿತ'

'ದಕ್ಷ್' ನಡೆಸಿದ ಸಮೀಕ್ಷೆ ವೇಳೆ ಮತದಾರರಿಗೆ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಿ ಕೆಲವು ನಿರ್ದಿಷ್ಟ ಪ್ರಶ್ನೆಗಳೂ ಇದ್ದವು.

ಈ ಎಲ್ಲ ವಿಷಯಗಳಲ್ಲಿ ಶಾಸಕರು ಪಡೆದಿರುವ ಅಂಕಗಳನ್ನು ಕ್ರೋಡೀಕರಿಸಿ, ಒಟ್ಟು 10 ಅಂಕಗಳಲ್ಲಿ ಅವರು ಗಳಿಸಿರುವ ಅಂಕಗಳನ್ನು ನೀಡಲಾಗಿದೆ. ಜನರು ಅತಿ ಮುಖ್ಯ ಪರಿಗಣಿಸಿರುವ ಐದು ಕ್ಷೇತ್ರಗಳಲ್ಲಿ ಶಾಸಕರು ಪಡೆದ ಅಂಕಗಳನ್ನು ಮಾತ್ರ ಪ್ರತ್ಯೇಕವಾಗಿ ನೀಡಲಾಗಿದೆ.

### ಸಮೀಕ್ಷೆಯಲ್ಲಿ ಕೇಳಿದ ಪ್ರಶ್ನೆಗಳು

1. ಕಾನೂನು ಮತ್ತು ಸುವ್ಯವಸ್ಥೆ
2. ಉತ್ತಮ ಸಾರಿಗೆ ವ್ಯವಸ್ಥೆ
3. ಉತ್ತಮ ರಸ್ತೆ
4. ಶಾಸಕರ ಲಭ್ಯತೆ
5. ಉತ್ತಮ ವಿದ್ಯುತ್ ಸೌಲಭ್ಯ
6. ಉದ್ಯೋಗಾವಕಾಶ
7. ಉದ್ಯೋಗ ಮತ್ತು ಶಿಕ್ಷಣ
8. ಉದ್ಯೋಗ ತರಬೇತಿ
9. ಶಾಸಕರ ವಿಶ್ವಾಸಾರ್ಹತೆ
10. ಆಸ್ಪತ್ರೆಗಳು
11. ಮಹಿಳಾ ಸುರಕ್ಷತೆ
12. ಕೃಷಿ ಸಾಲ ಲಭ್ಯತೆ
13. ಕೃಷಿಗೆ ಸಾಕಷ್ಟು ಉದ್ಯೋಗ ಪೂರೈಕೆ
14. ಆಹಾರ ಸಬ್ಸಿಡಿ ವಿತರಣೆ
15. ಒಳಚರಂಡಿ ವ್ಯವಸ್ಥೆ
16. ಗುಣಮಟ್ಟದ ನೀರು ಪೂರೈಕೆ
17. ಭಯೋತ್ಪಾದನೆ ನಿಗ್ರಹ
18. ಉತ್ತಮ ಶಾಲೆಗಳು
19. ಪರಿಸರ ಸಂರಕ್ಷಣೆ
20. ಕೃಷಿ ಉತ್ಪನ್ನಗಳಿಗೆ ಬೆಲೆ
21. ನೀರಾವರಿ ಯೋಜನೆಗಳು
22. ಬಿತ್ತನೆ ಬೀಜ, ರಸಗೊಬ್ಬರ ಸಬ್ಸಿಡಿ
23. ಕಸ ವಿಲೇವಾರಿ
24. ಭ್ರಷ್ಟಾಚಾರ ನಿಗ್ರಹ
25. ಕೆರೆ ಪುನರುಜ್ಜೀವನ
26. ಪಾರ್ಕಿಂಗ್ ಸೌಲಭ್ಯ
27. ಉದ್ಯಾನಗಳ ನಿರ್ವಹಣೆ
28. ಸಂಚಾರ ವ್ಯವಸ್ಥೆ

### ಸಿದ್ದು ಬಿ. ನ್ಯಾಮಗೌಡ — ಕಾಂಗ್ರೆಸ್
ಜಿಲ್ಲೆ: ಬಾಗಲಕೋಟೆ
ಕ್ಷೇತ್ರ: ಜಮಖಂಡಿ




### ಎಚ್.ವೈ. ಮೇಟಿ — ಕಾಂಗ್ರೆಸ್
ಜಿಲ್ಲೆ: ಬಾಗಲಕೋಟೆ
ಕ್ಷೇತ್ರ: ಬಾಗಲಕೋಟ




# ಕಾನೂನು ಮತ್ತು ಸುವ್ಯವಸ್ಥೆ: ಸರ್ಕಾರಕ್ಕೆ ಸಿಗದ ಮನ್ನಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದು ವಿರೋಧ ಪಕ್ಷಗಳು ಆಪಾದಿಸುತ್ತಿವೆ. ಈ ಸಂದರ್ಭದಲ್ಲಿ, 'ದಕ್ಷ್' ಸಂಸ್ಥೆ ಜತೆ ನಡೆಸಿದ ಸಮೀಕ್ಷೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುರಿತು ಕಂಡುಕೊಂಡ ಜನಾಭಿಪ್ರಾಯವನ್ನು 'ಪ್ರಜಾವಾಣಿ' ಇಲ್ಲಿ ಪ್ರಸ್ತುತಪಡಿಸುತ್ತಿದೆ.

ವಿರೋಧ ಪಕ್ಷಗಳ ಇಂತಹ ಆರೋಪ ಕಾವೇರುವುದಕ್ಕೆ ಮುನ್ನವೇ ನಡೆಸಿದ ಸಮೀಕ್ಷೆಯಲ್ಲಿ, ಕಾನೂನು ಮತ್ತು ಸುವ್ಯವಸ್ಥೆ ಕುರಿತು ಕೇಳಲಾದ ಪ್ರಶ್ನೆಗೆ ರಾಜ್ಯ ಸರ್ಕಾರ ಅತ್